ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 214/2021**

**ಫ್ರಾಸಾ- 4 ಚಾಸಾ- 3**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಖುಷಿ |
| ತಂದೆಯ ಹೆಸರುಃ | : | ಶಿವರಾಜು |
| ವಯಸ್ಸುಃ | : | 16 ವರ್ಷ |
| ಉದ್ಯೋಗಃ | : | ವಿದ್ಯಾರ್ಥಿನಿ |
| ವಾಸ | : | ಗಾಡೇನಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ನನ್ನ ತಾತ. ಚಾಸಾ-2 ಅಜ್ಜಿ. ಆರೋಪಿತರ ಪರಿಚಯವಿದೆ. 2018ರಲ್ಲಿ ನನ್ನ ಅಜ್ಜಿಗೆ ಹಲ್ಲುನೋವು ಆಗಿದ್ದರಿಂದ ನಾನು, ತಾತ, ತಮ್ಮ, ಅಜ್ಜಿ ಆಸ್ಪತ್ರೆಗೆ ಹೊರಟಿದ್ದೆವು. ವಾಪಸ್ಸು ಮನೆ ಕಡೆ ಬರುವಾಗ ರಾತ್ರಿ 7 ಗಂಟೆ ಆಗಿತ್ತು. ನಾವು ಗಾಡೇನಹಳ್ಳಿ ಕ್ರಾಸ್ ನಿಂದ ಸ್ವಲ್ಪ ಮುಂದಕ್ಕೆ ಹೋಗುವಾಗ ಆರೋಪಿಯು ಬೈಕಿನಲ್ಲಿ ಜೋರಾಗಿ ಬಂದು ನಾವು ಹೋಗುತ್ತಿದ್ದ ಬೈಕಿಗೆ ಗುದ್ದಿಸಿದರು. ಆಗ ನಮ್ಮ ಬೈಕು ಕೆಳಗಡೆ ಬಿತ್ತು. ಅವರು ತನ್ನ ಕೈಯಲ್ಲಿದ್ದ ಚಾಕು ತೋರಿಸಿ ನನ್ನ ತಾತನಿಗೆ ನಿಮ್ಮ ಬಳಿ ಏನೇನಿದೆ ತೆಗೆಯಿರಿ ಎಂದು ಹೇಳಿದರು. ಆರೋಪಿಯು ನನ್ನ ಅಜ್ಜಿಯ ಕೊರಳಲ್ಲಿದ್ದ ಚಿನ್ನದ 2 ಚೈನನ್ನು ಮತ್ತು ತಾತನ ಬಳಿ ಇದ್ದ ಪರ್ಸ್ ಮೊಬೈಲ್, ಹತ್ತುಸಾವಿರ ರೂ ನಗದು ಇತ್ಯಾದಿಯನ್ನು ಕಿತ್ತುಕೊಂಡನು. ನಂತರ ಚಾಕುವನ್ನು ಕೈಯಲ್ಲಿ ಹಿಡಿದುಕೊಂಡು ಶಾಂತಿಗ್ರಾಮದ ಕಡೆಗೆ ಹೋದನು. ಆತ ಬಂದಿದ್ದ ಬೈಕ್ ನ ನಂಬರನ್ನು ನಾನು ಗಮನಿಸಲಿಲ್ಲ. ನಂತರ ಅಜ್ಜಿಯ ಚೈನನ್ನು ನಾನೆಲ್ಲೂ ನೋಡಲಿಲ್ಲ. ಅದನ್ನು ನೋಡಿದರೆ ಗುರುತಿಸುತ್ತೇನೆ. ಆ ಚೈನು ಈಗ ನಾನು ನೋಡುತ್ತಿರುವ ನಿಪಿ-3 ರ ಫೋಟೋದಲ್ಲಿ ಕಂಡುಬರುತ್ತದೆ. ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ.

2.ನಂತರ ಪೊಲೀಸರು ನಮ್ಮನ್ನು ಕರೆಸಿದ್ದರು. ಅಲ್ಲಿದ್ದ ವ್ಯಕ್ತಿಯನ್ನು ತೋರಿಸಿದರು. ಪೊಲೀಸರು ಘಟನೆಹೇಗೆ ನಡೆದಿದೆ ಎಂದು ಕೇಳಿದರು. ಅಲ್ಲಿ ನಾನು ಆ ವ್ಯಕ್ತಿಯು ನನ್ನ ಅಜ್ಜ ಮತ್ತು ಅಜ್ಜಿಯು ಬಳಿಯಿಂದ ದರೋಡೆ ಮಾಡಿದ ವ್ಯಕ್ತಿ ಎಂದು ಗುರುತಿಸಿದೆನು. ಈಗ ಆ ವ್ಯಕ್ತಿಯನ್ನು ನನಗೆ ಗುರುತಿಸಲು ಸಾಧ್ಯವಿಲ್ಲ, ಯಾಕೆಂದರೆ ಆಗ ನಾನು ಚಿಕ್ಕವಳಿದ್ದೆನು. ಆ ದಿವಸ ವ್ಯಕ್ತಿಯ ಕೈಯಲ್ಲಿದ್ದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗ ನಾನು ನೋಡುತ್ತಿರುವ ಎಂ.ಒ.3 ಮತ್ತು 4 ಆಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು **ಭಾಗಶಃ** ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಶಾಂತಿಗ್ರಾಮದ ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರೆಸಿದ್ದರು ಎಂದರೆ ನಿಜ. ಆಗ ಠಾಣೆಯಲ್ಲಿ ಇದ್ದ ವ್ಯಕ್ತಿ ಈ ದಿವಸ ನ್ಯಾಯಾಲಯದ ಮುಂದಿರುವ ಆರೋಪಿ ಎಂದರೆ ನಿಜ. ಅಲ್ಲಿ ನಾನು ಅವರನ್ನು ಗುರುತಿಸಿ ಅವರೇ ನನ್ನ ಅಜ್ಜಿ ಅಜ್ಜನಿಂದ ದರೋಡೆ ಮಾಡಿದ್ದು ಎಂದು ಗುರುತಿಸಿದೆ ಎಂದರೆ ಸರಿ. ಸದರಿ ವ್ಯಕ್ತಿ ಈ ಪ್ರಕರಣದ ಆರೋಪಿ ಎಂದರೆ ಸರಿ,

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಕಾರಣ ಕಂಡುಬಾರದ ಕಾರಣ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಗಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**